**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**
**ದೊಡ್ಡಬಳ್ಳಾಪುರ**

**ಸಿ ಸಿ ನಂ : 1767/2020**

**ಪಿ ಡಬ್ಲ್ಯೂ - 2**

**ಸಿ ಡಬ್ಲ್ಯೂ - 3**

**ದಿಃ 29.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ಮಂಜುನಾಥ**

**ತಂದೆಯ ಹೆಸರು ಃ ಹನುಮಂತರಾಯ**

**ವಯಸ್ಸು ಃ 29 ವರ್ಷ**

**ಉದ್ಯೋಗ ಃ ಡ್ರೈವರ್**

**ವಿಳಾಸ ಃ ಖನಸವಾಡಿ, ದೊಡ್ಡಬಳ್ಳಾಪುರ**

**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದಃ**

ಮೃತ ಗಂಗರಾಮಯ್ಯನನ್ನು ನೋಡಿರುತ್ತೇನೆ. ಚಾಸಾ-1, 2 ಹಾಗೂ 10 ರವರು ಗೊತ್ತು. ಆರೋಪಿಯನ್ನು ನೋಡಿರುತ್ತೇನೆ, ಪರಿಚಯವಿಲ್ಲ. ದಿ.18.04.2020 ರಂದು ನಾನು ಮೇಕೆಯನ್ನು ಮೇಯಿಸುತ್ತಾ ಬೆಳವಂಗಲದ ಬಳಿ ಇರುವ ಕೆರಯ ಹತ್ತಿರ ಬೆಳಗ್ಗೆ 11-30 ಗಂಟೆಗೆ ಇದ್ದೆ, ಅಲ್ಲಿ ಗಂಗರಾಮಯ್ಯ ಕೂಡ ಇದ್ದರು. ಸುಮಾರು 12-00 ಗಂಟೆಯ ಹೊತ್ತಿಗೆ ಒಂದು ಲಾರಿ ಕಂಟೇನರ್ ಸಂಖ್ಯೆ 0184 ಗಾಡಿಯ ಪೂರ್ತಿ ಸಂಖ್ಯೆ ನೆನಪಾಗುತ್ತಿಲ್ಲ, ಅತಿವೇಗ ಹಾಗೂ ಅಜಾಗೂರುಕತೆಯಿಂದ ಚಾಲನೆ ಮಾಡಿಕೊಂಡು ಬಂದು ಕೆರೆಯ ತಿರುವಿನಲ್ಲಿ ನಿಯಂತ್ರಣ ತಪ್ಪಿ, ಉರುಳಿ ಲಾರಿಯು ಜಾರಿಕೊಂಡು ಹೋಗಿ ರಸ್ತೆಯ ಬಳಿಯ ಪುಟ್ ಪಾತಿನಲ್ಲಿ ನಿಂತಿದ್ದ ಗಂಗರಾಮಯ್ಯನವರಿಗೆ ಜೋರಾಗಿ ಗುದ್ದಿ ಅವರ ಮೇಲೆ ಗಾಡಿ ಬಿದ್ದಿತು. ತಕ್ಷಣ ನಾನು ಚಾಸಾ-10 ರವರಿಗೆ ಫೋನ್ ಮಾಡಿ ವಿಚಾರವನ್ನು ತಿಳಿಸಿದೆ. ನಂತರ ಚಾಸಾ-10 ರವರು ಬಂದು ಸ್ವಲ್ಪ ಹೊತ್ತಿನ ನಂತರ ಸ್ಥಳಕ್ಕೆ ಆ್ಯಂಬುಲೆನ್ಸ್ ಬಂದಿದ್ದು ಗಂಗರಾಮಯ್ಯ ನವರನ್ನು ನೆಲಮಂಗಲದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದರು. ಆಸ್ಪತ್ರೆಯಲ್ಲಿ ಗಂಗರಾಮಯ್ಯ ಮೃತಪಟ್ಟ ವಿಚಾರ ನನಗೆ ತಿಳಿಯಿತು. ಲಾರಿಯ ಮುಂದಿನ ಗಾಜು ಹೊಡೆದು, ಗಾಡಿಯ ಬಾಗಿಲು ಜಖಂಗೊಂಡಿತ್ತು. ಆರೋಪಿತನ ಬಗ್ಗೆ ಆಗ ತಿಳಿದುಕೊಳ್ಳಲಿಲ್ಲ. ನಾನು ಈ ಕುರಿತು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

ಸಾಕ್ಷಿಯು ನಿಪಿ-3 ಮತ್ತು 4 ಪೋಟೋದಲ್ಲಿ ಲಾರಿ ಕಂಟೇನರ್ ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಸಮಯ ಕೋರಿದ್ದು, ರೂ.300/- ಖರ್ಚಿನೊಂದಿಗೆ ಸಮಯ ನೀಡಲಾಯಿತು.**

**( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಕಂಪ್ಯೂಟರನಲ್ಲಿ ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**